## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ 510/2023

**ಸಾಕ್ಷಿಯನ್ನು ದಿಃ 06.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಜಯಮ್ಮ | ಸಿಡಬ್ಲ್ಯೂ5 | ಪಿಡಬ್ಲ್ಯೂ4 |
| ಗಂಡನ ಹೆಸರು | ಜಗದೀಶ | | |
| ವಯಸ್ಸು | 43 ವರ್ಷ | | |
| ಉದ್ಯೋಗ | ಗ್ರಂಥಾಲಯದ ಕೆಲಸ | | |
| ವಾಸಸ್ಥಳ | ಹಗರಣಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಚಾಸಾ 1 ರಿಂದ 4, 6 ರಿಂದ 8 ಗೊತ್ತು. ಮೃತ ಜ್ಯೋತಿ ಮತ್ತು ಮೃತ ನಾಗಯ್ಯ ಗೊತ್ತು. ನಾಗಯ್ಯ ಮತ್ತು ಜ್ಯೋತಿ ಒಂದು ರಸ್ತೆ ಅಪಘಾತದಲ್ಲಿ ಮೃತ ಪಟ್ಟರು. ದಿನಾಂಕ 27.06.2022 ರಂದು ಮಂಡ್ಯದಲ್ಲಿ ಗ್ರಂಥಾಲಯ ಮೇಲ್ವಿಚಾರಕ ಸಭೆ ಇತ್ತು. ಸದರಿ ಸಭೆಯಲ್ಲಿ ಭಾಗವಹಿಸಲು ಒಟ್ಟು 16 ಜನ ಹೋಗಿದ್ದೆವು. ವಾಪಸ್ಸು ಅದೇ ದಿನ ಬರುವಾಗ ನಾನು, ಚಾಸಾ 1 ರಿಂದ 4, 6 ರಿಂದ 8 ಮತ್ತು ಮೃತ ನಾಗಯ್ಯ ಹಾಗೂ ಜ್ಯೋತಿ ಇದ್ದೆವು. ರಾತ್ರಿ 8 ಗಂಟೆಗೆ ನಾವು ವಾಪಸ್ಸು ಟೆಂಪೋದಲ್ಲಿ ಊರಿಗೆ ಬರುತ್ತಿದ್ದೆವು. ನಾವು ಮಲ್ಲಿನಾಥಪುರ ಊರಿನಲ್ಲಿ ಬರುತ್ತಿದ್ದಾಗ ಹುಣಸೂರು ಕಡೆಯಿಂದ ಕೆ ಎಸ್ ಆರ್ ಟಿ ಸಿ ಬಸ್ ಬರುತ್ತಿತ್ತು. ಆಗ ಅಪಘಾತವಾಯಿತು. ಅಪಘಾತ ಹೇಗಾಯಿತು ಎಂದು ನನಗೆ ಗೊತ್ತಾಗಲಿಲ್ಲ. ನನ್ನ ಕೈ ಕಾಲಿಗೆ ಏಟಾಯಿತು. ಉಳಿದವರಿಗೆ ಅಲ್ಪಸ್ವಲ್ಪ ಗಾಯಗಳಾದವು. ನಾಗಯ್ಯ ಮತ್ತು ಜ್ಯೋತಿ ಅಪಘಾತದಿಂದ ಮೃತಪಟ್ಟರು. ನಾನು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಅಪಘಾತವು ಟೆಂಪೋ ಚಾಲಕನ ತಪ್ಪಿನಿಂದಾಗಿದೆ. ನಾನು ಆ ದಿನ ಟೆಂಪೋ ಚಾಲಕನನ್ನು ನೋಡಿದ್ದೇನೆ.

ಈ ದಿನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ನಾನು ಅಪಘಾತದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿನಾಂಕ 28.06.2022 ರಂದು ಬಿಳಿಕೆರೆ ಪೊಲೀಸ್ ಠಾಣೆಗೆ ಹೋದೆ. ನಾನು ಅಪಘಾತದ ಸ್ಥಳಕ್ಕೆ ಹೋಗಿ ಅಪಘಾತ ನಡೆದ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದೇನೆ. ಅಲ್ಲಿ ಪೊಲೀಸರು ಮಹಜರು ಮಾಡಿದ್ದಾರೆ. ನನ್ನ ಜೊತೆ ಬೇರೆ ಯಾರು ಇರಲಿಲ್ಲ. ಮಹಜರನ್ನು ಸಂಜೆ 4 ಗಂಟೆಯಿಂದ 4.45 ರವರೆಗೆ ಮಾಡಿದ್ದಾರೆ. ಮಹಜರು ಸಮಯಕ್ಕೆ ಸ್ಥಳದಲ್ಲಿ ನಕ್ಷೆಯನ್ನು ತಯಾರಿಸಿದ್ದಾರೆ. ಸಾಕ್ಷಿ ಸ್ಥಳ ಮಹಜರು ಮತ್ತು ಕಚ್ಚಾ ನಕಾಶೆಯಲ್ಲಿ ತನ್ನ ಸಹಿಗಳನ್ನು ಗುರುತಿಸಿದ್ದು ಸದರಿ ದಾಖಲೆಗಳನ್ನು ನಿಪಿ 12 ಮತ್ತು 13 ಎಂದು ಸಾಕ್ಷಿಯ ಸಹಿಗಳನ್ನು ನಿಪಿ 12(ಎ) ಮತ್ತು ನಿಪಿ 13(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಅಮಾನತ್ತು ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 14 ಎಂದು ಸಾಕ್ಷಿಯ ಸಹಿಯನ್ನು ನಿಪಿ14(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ದಿನಾಂಕ 28.06.2022 ರಂದು ಪೊಲೀಸರ್ ಠಾಣೆಯಲ್ಲಿ ಮಾಡಿದ್ದೇನೆ. ಪೊಲೀಸರ ಕೋರಿಕೆಯ ಮೇರೆಗೆ ಸದರಿ ಸಹಿಯನ್ನು ಹಾಕಿದ್ದೇನೆ. ಈಗ ನೋಡುತ್ತಿರುವ 4 ಭಾವಚಿತ್ರಗಳಲ್ಲಿ ನಾನಿದ್ದೇನೆ. ಆ ಪೈಕಿ ಎರಡು ಭಾವಚಿತ್ರಗಳನ್ನು ಪೊಲೀಸ್ ಠಾಣೆಯಲ್ಲಿ ಮತ್ತು ಎರಡು ಭಾವಚಿತ್ರಗಳನ್ನು ಅಪಘಾತದ ಸ್ಥಳದಲ್ಲಿ ತೆಗೆಯಲಾಗಿದೆ. ಸದರಿ ಭಾವಚಿತ್ರಗಳನ್ನು ನಿಪಿ 15 ರಿಂದ 18 ಎಂದು ಗುರುತಿಸಲಾಯಿತು. ನಾವು ಆ ದಿನ ಪ್ರಯಾಣಿಸುತ್ತಿದ್ದ ಟೆಂಪೋ ವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ 3 ರಿಂದ 7 ರ ಭಾವಚಿತ್ರಗಳಲ್ಲಿ ಟೆಂಪೋವನ್ನು ನೋಡಿ ಗುರುತಿಸುತ್ತಾರೆ. ನಾವು ಪ್ರಯಾಣಿಸುತ್ತಿದ್ದ ಟೆಂಪೋ ಸಂಖ್ಯೆ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ-**

ಆ ದಿನ ನಾವು ಪ್ರಯಾಣಿಸುತ್ತಿದ್ದ ಟೆಂಪೋ ಟ್ರಾವೆಲರ್ಸ್ ಸಂಖ್ಯೆ ಕೆಎ-12-ಎ-6816 ಎಂದರೆ ಸರಿ. ಟೆಂಪೋ ಟ್ರಾವೆಲರ ವಾಹನವನ್ನು ಚಾಲನೆ ಮಾಡುತ್ತಿದ್ದ ಅದರ ಚಾಲಕನಾದ ಪ್ರದೀಪ ಸದರಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿಕೊಂಡು ಹೋಗಿ ಡಿವೈಡರ್ ಬಲ ಭಾಗದಲ್ಲಿ ಎದರುಗಡೆಯಿಂದ ಬರುತ್ತಿದ್ದ ಅಂದರೆ ಹುಣಸೂರು ಕಡೆಯಿಂದ ಬರುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ ನ ಮುಂಭಾಗಕ್ಕೆ ಡಿಕ್ಕಿ ಮಾಡಿದ ಎಂದರೆ ಸರಿ. ಅಪಘಾತದಿಂದ ಗಾಯಗಳಾಗಿದ್ದ ಜ್ಯೋತಿ, ಸುನಿತಮ್ಮ, ಯಶೋದಮ್ಮ ಮತ್ತು ಕವಿತಾರವರನ್ನು ಆ್ಯಂಬುಲೆನ್ಸ್ ನಲ್ಲಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ. ಜ್ಯೋತಿರವರಿಗೆ ತ್ರಿವ್ರ ಸ್ವರೂಪದ ಗಾಯಗಳಾಗಿದ್ದ ಕಾರಣ ಅವರನ್ನು ಮೈಸೂರಿನ ಬೃಂದಾವನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 30.06.2022 ರಂದು ಬೆಳಿಗ್ಗೆ 5.46 ಗಂಟೆಗೆ ಅವರು ಮೃತಪಟ್ಟರು ಎಂದರೆ ಸರಿ. ನಿಪಿ 12 ರ ಮಹಜರ್ ಕಾಲಕ್ಕೆ ಚಾಸಾ 9 ಮತ್ತು 10 ರವರು ಹಾಜರಿದ್ದರು ಎಂದರೆ ಸರಿ. ದಿನಾಂಕ 28.06.2022 ರಂದು ಪೊಲೀಸ್ ಠಾಣೆಯ ಆವರಣದಲ್ಲಿ ಮೇಲೆ ಹೇಳಿದ ಬಸ್ ಮತ್ತು ಟೆಂಪೋವನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ಸಂಜೆ 5 ರಿಂದ 5.30 ರವರೆಗೆ ಮಹಜರು ಮಾಡಿದರು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 9 ಮತ್ತು 10 ರವರು ಇದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಆರ್ ವಕೀಲರಿಂದಃ**

ನಾನು ಈಗಲೂ ಗ್ರಂಥ ಪಾಲಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಪರಿಹಾರ ಕೋರಿ ಅರ್ಜಿ ಸಲ್ಲಿಸುವಂತೆ ವಕೀಲರಿಗೆ ಹೇಳಿದ್ದೇನೆ. ಆದರೆ ಇನ್ನೂ ಕೂಡ ಸಲ್ಲಿಸಿಲ್ಲ. ಆ ದಿನ ರಾತ್ರಿ ಮಂಡ್ಯದಿಂದ ಬರುವಾಗ ಮಳೆ ಬರುತ್ತಿತ್ತು ಎಂದರೆ ಇಲ್ಲ. ನಾನು ಟೆಂಪೋದ ಬಲಭಾಗದ 3 ನೇ ಸೀಟ್ ನಲ್ಲಿ ಕುಳಿತಿದ್ದೆ. ನನ್ನ ಮುಂದೆ ಕವಿತಾ, ಕವಿತಾ ಮುಂದೆ ನಾಗಯ್ಯ ಕುಳಿತಿದ್ದರು. ನಾನು ಈ ದಿನ ಮೊದಲ ಬಾರಿಗೆ ಹೇಳಿಕೆ

ನೀಡುತ್ತಿದ್ದೇನೆ. ನನ್ನನ್ನು ಖಾಸಗಿ ವಾಹನದಲ್ಲಿ ಕೆ ಆರ್ ಆಸ್ಪತ್ರೆಗೆ ದಾಖಲಿಸಿದರು. ನಾನು ವ್ಯಾನ್ ಒಳಗೆ ಇದ್ದ ಕಾರಣ ಅಪಘಾತ ಹೇಗಾಯಿತು ಎಂದು ಗೊತ್ತಾಗಲಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.